NOVEMBER 15, 2025

# AKASHAVANI - DHARWAD

# PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**'ಮೇಕ್ ಇನ್ ಇಂಡಿಯಾ, ಮೇಕ್ ಫಾರ್ ದಿ ವರ್ಲ್ಡ್';** ಜಪಾನ್ ದೇಶದ, ನಿಡೇಕ್ ಉತ್ಪಾದನಾ ಘಟಕಕ್ಕೆ, ಹುಬ್ಬಳ್ಳಿಯಲ್ಲಿ ಚಾಲನೆ.

**ಭಗವಾನ್ ಬಿರ್ಸಾ ಮುಂಡಾ** ಅವರ, 150ನೇ ಜಯಂತಿ; ಜನ್ ಜಾತೀಯ ಗೌರವ ದಿನಾಚರಣೆ.

**ಸರ್ದಾರ** ವಲ್ಲಭ ಭಾಯಿ ಪಟೇಲರ, 150ನೇ ಜಯಂತ್ಯುತ್ಸವ; ರಾಜ್ಯದ ಹಲವೆಡೆ, ಇಂದು, ಏಕತಾ ನಡಿಗೆ.

**ಇಂದು ಬೆಂಗಳೂರಿನಲ್ಲಿ,** ಸಾಲು ಮರದ ತಿಮ್ಮಕ್ಕ ಅವರ, ಪಾರ್ಥಿವ ಶರೀರದ ಅಂತ್ಯಕ್ರಿಯೆ.

<><><>

**ಈಗ ವಾರ್ತೆಗಳ ವಿವರ**

<><><>

**ಭಾರತ, ಏ ್ಯದ ಪ್ರಮುಖ** ಉತ್ಪಾದಕ ದೇಶವಾಗಿದೆ. ಜಗತ್ತಿನ ಅನೇಕ ದೇಶಗಳು, ಭಾರತದ ಡಿಜಿಟಲ್ ವ್ಯವಸ್ಥೆ, ಆಡಳಿತ ಬದ್ಧತೆ ಹಾಗೂ ಯುವ ಕಾರ್ಯಪಡೆಯ ಕೌಶಲ ಕಂಡು, ಇಲ್ಲಿ ಉದ್ದಿಮೆಗಳನ್ನು ಆರಂಭಿಸಲು, ಉತ್ಸುಕವಾಗಿವೆ ಎಂದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ತಿಳಿಸಿದ್ದಾರೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿಯಲ್ಲಿ, ಜಪಾನ್ ಮೂಲದ, 'ನಿಡೇಕ್ ದಿ ಆರ್ಚರ್ಡ್ ಹಬ್' ಉದ್ಘಾಟಿಸಿ, ಅವರು ಮಾತನಾಡಿದರು. ಪ್ರಧಾನಮಂತ್ರಿ

ನರೇಂದ್ರ ಮೋದಿ ಅವರ, ಮಹತ್ವಾಕಾಂಕ್ಷೆಯ, 'ಮೇಕ್ ಇನ್ ಇಂಡಿಯಾ, ಮೇಕ್ ಫಾರ್ ದಿ ವರ್ಲ್ಡ್' ವಿಶ್ವ ಪ್ರಗತಿಯ ಪ್ರತೀಕವಾಗಿವೆ ಎಂದರು.

<><><>

**ಸ್ವಾತಂತ್ರ್ಯ ಸೇನಾನಿ, ಧರ್ತಿ** ಆಬಾ, ಭಗವಾನ್ ಬಿರ್ಸಾ ಮುಂಡಾ ಅವರ, 150ನೇ ಜಯಂತ್ಯುತ್ಸವ, ಇಂದು. ಕೇಂದ್ರ ಬುಡಕಟ್ಟು ಸಚಿವಾಲಯ, ಜನ್ ಜಾತೀಯ ಗೌರವ ದಿವಸ ಕಾರ್ಯಕ್ರಮಗಳನ್ನು, ದೇಶಾದ್ಯಂತ ಆಯೋಜಿಸಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಮನ್ ಕಿ ಬಾತ್ ನ, 127ನೇ ಆವೃತ್ತಿಯಲ್ಲಿ, ಜಾರ್ಖಂಡ್ ರಾಜ್ಯದ ಉಲಿಹಾತು ಗ್ರಾಮದಲ್ಲಿ ಜನಿಸಿದ, ಕ್ರಾಂತಿಕಾರಿ, ಭಗವಾನ್ ಬಿರ್ಸಾ ಮುಂಡಾ ಕುರಿತು, ಉಲ್ಲೇಖಿಸಿದ್ದು ಹೀಗೆ..

<><><>

## ನರೇಂದ್ರ ಮೋದಿ ಧ್ವನಿ 41 ಸೆಕೆಂದುಗಳು

<><><>

ಕೇಂದ್ರ ಬುಡಕಟ್ಟು ಸಚಿವಾಲಯ, ದೇಶಾದ್ಯಂತ 11 ವಸ್ತು ಸಂಗ್ರಹಾಲಯಗಳನ್ನು ನಿರ್ಮಿಸಲಿದ್ದು, ಬ್ರಿಟಿಷರ ವಿರುದ್ಧ ಬುಡಕಟ್ಟು ಸಮುದಾಯ ನಡೆಸಿದ ಹೋರಾಟ ಹಾಗೂ ಸಂಸ್ಕೃತಿ ಮತ್ತು ಇತಿಹಾಸವನ್ನು ಪರಿಚಯಿಸಲಿದೆ. ಆದಿ ಸಂಸ್ಕೃತಿ ಯೋಜನೆ ಮೂಲಕ, ಬುಡಕಟ್ಟು ಕಲೆಗಳಿಗೆ ವೇದಿಕೆ ಕಲ್ಪಿಸಿ, ಆದಿ ವಾಣಿ ಮೂಲಕ, ಬುಡಕಟ್ಟು ಸಮೂಹದ, ಮುಂಡರಿ, ಭಿಲಿ, ಗೋಂದಿ, ಸಂತಾಲಿ, ಗಾರೋ ಮೊದಲಾದ ಭಾಷೆಗಳಲ್ಲಿರುವ, ಜನಪದ, ಮೌಖಿಕ ಸಂಪ್ರದಾಯ ಹಾಗೂ ಸಾಂಸ್ಕೃತಿಕ ಜ್ಞಾನವನ್ನು, ಕೃತಕ ಬುದ್ಧಿಮತ್ತೆ ಬಳಸಿ, ಭಾಷಾಂತರಿಸಿ, ಸಂರಕ್ಷಿಸಲು, ಯೋಜಿಸಲಾಗಿದೆ.

<><><>

**ಭಗವಾನ್ ಬಿರ್ಸಾ ಮುಂಡಾ ಅವರ, 150ನೇ ಜಯಂತಿ ಹಿನ್ನೆಲೆ,** ಉತ್ತರಕನ್ನಡ ಜಿಲ್ಲೆಯಲ್ಲಿ ಜನ್ ಜಾತೀಯ ಗೌರವ ದಿವಸ ಕಾರ್ಯಕ್ರಮ ಆಯೋಜಿತವಾಗಿದೆ. ಆದಿ ಕರ್ಮಯೋಗಿ ಅಭಿಯಾನದ ಕುರಿತು, ಮಾಹಿತಿ ನೀಡಿದ್ದಾರೆ, ಜಿಲ್ಲಾ ಪರಿಶಿಷ್ಟ ವರ್ಗಗಳ ಇಲಾಖೆ ಅಧಿಕಾರಿ, ವೈ.ಕೆ. ಉಮೇಶ.

<><><>

## ವೈ.ಕೆ. ಉಮೇಶ ಧ್ವನಿ 49 ಸೆಕೆಂದುಗಳು

<><><>

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ,** ಗೃಹ ಆರೋಗ್ಯ ಯೋಜನೆ ಅಡಿ, ಆರೋಗ್ಯ ಕಾರ್ಯಕರ್ತರು, ಕಳೆದ ಏಪ್ರಿಲ್ 1 ರಿಂದ ಅಕ್ಟೋಬರ್ ಅಂತ್ಯದ ವರೆಗೆ, 20 ಲಕ್ಷ 44 ಸಾವಿರದ 204 ಮನೆಗಳಿಗೆ ಭೇಟಿ ನೀಡಿ, 64 ಲಕ್ಷ ಜನರಿಗೆ, ಉಚಿತವಾಗಿ ಮಧುಮೇಹ ತಪಾಸಣೆ ಕೈಗೊಂಡಿದ್ದಾರೆ. ಆರೋಗ್ಯ ಖಾತೆ ಸಚಿವ, ದಿನೇಶ ಗುಂಡೂರಾವ, ವಿಶ್ವ ಮಧುಮೇಹ ದಿನದ ಹಿನ್ನೆಲೆ, ಎಕ್ಸ್ ಮಾಧ್ಯಮದಲ್ಲಿ ಈ ವಿಷಯ ತಿಳಿಸಿ, ಕಳೆದ ಆರು ತಿಂಗಳಲ್ಲಿ, 32 ಲಕ್ಷ 99 ಸಾವಿರದ 798 ಪುರು ರು ಮತ್ತು 33 ಲಕ್ಷ 92 ಸಾವಿರದ 486 ಮಹಿಳೆಯರಲ್ಲಿ, ಮಧುಮೇಹ ತಪಾಸಣೆ ನಡೆಸಲಾಗಿದೆ. ಸರಿಯಾದ ಆಹಾರ ಕ್ರಮ, ಶಿಸ್ತುಬದ್ಧ ಜೀವನ ಶೈಲಿಯಿಂದ ಆರಂಭದಲ್ಲೇ ಮಧುಮೇಹವನ್ನು ತಡೆಯಬಹುದು ಎಂದಿದ್ದಾರೆ.

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(56 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಸ್ವತಂತ್ರ ಭಾರತದ, ಪ್ರಥಮ ಗೃಹ ಮಂತ್ರಿ,** ಉಕ್ಕಿನ ಮನುಷ್ಯ ಸರ್ದಾರ ವಲ್ಲಭ ಭಾಯಿ ಪಟೇಲ್ ಅವರ, 150 ನೇ ಜಯಂತಿ ಹಿನ್ನೆಲೆ, ಧಾರವಾಡ ಜಿಲ್ಲೆಯ, ಹುಬ್ಬಳ್ಳಿಯಲ್ಲಿ ಏಕತಾ ನಡಿಗೆ ಇಂದು ಬೆಳಗ್ಗೆ 8 ಗಂಟೆಗೆ, ಆಯೋಜಿತವಾಗಿದೆ. ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ಕೆ.ಎಲ್.ಇ. ಸಂಸ್ಥೆಯ, ಬಿ.ವಿ. ಭೂಮರೆಡ್ಡಿ ಅಭಿಯಾಂತ್ರಿಕ ಮತ್ತು ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ, ಚಾಲನೆ ನೀಡಲಿದ್ದಾರೆ. ಏಕತಾ ನಡಿಗೆ, ತೋಳನಕೆರೆ ತನಕ ನಡೆಯಲಿದೆ ಎಂದು, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಮಹಾಪೌರರಾದ ಜ್ಯೋತಿ ಪಾಟೀಲ, ತಿಳಿಸಿದ್ದಾರೆ. ಬೆಂಗಳೂರು ಕುರುಬರಹಳ್ಳಿ, ರಾಜಕುಮಾರ ಪ್ರತಿಮೆ ಬಳಿ, ಇಂದು ಬೆಳಗ್ಗೆ 9 ಗಂಟೆಗೆ ಆಯೋಜಿತ,

ಏಕತಾ ನಡಿಗೆಯಲ್ಲಿ, ಕೇಂದ್ರ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಖಾತೆ ಸಚಿವರಾದ ಶೋಭಾ ಕರಂದ್ಲಾಜೆ ಪಾಲ್ಗೊಳ್ಳಲಿದ್ದಾರೆ. ಬೀದರಿನ ಬರೀದ್ ಶಾಹಿ ಮೈದಾನದಿಂದ, ಇಂದು ಬೆಳಗ್ಗೆ 8 ಗಂಟೆಗೆ, ಎರಡನೇ ದಿನದ, ಏಕತಾ ನಡಿಗೆ ಆರಂಭಗೊಂಡು, ರಂಗ ಮಂದಿರದಲ್ಲಿ ಸಮಾರೋಪಗೊಳ್ಳಲಿದೆ. ಬಳಿಕ, ಬೆಳಗ್ಗೆ 10 ಗಂಟೆಗೆ ಸಭಾ ಕಾರ್ಯಕ್ರಮ ನಡೆಯಲಿದೆ ಎಂದು, ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ತಿಳಿಸಿದ್ದಾರೆ.

<><><>

**ಮರಗಳನ್ನೇ ಮಕ್ಕಳಂತೆ ಸಾಕಿ, ಸಲುಹಿದ,** ವೃಕ್ಷಮಾತೆ, ಪದ್ಮಶ್ರೀ ಪುರಸ್ಕೃತೆ, ಸಾಲು ಮರದ ತಿಮ್ಮಕ್ಕ ಅವರ, ಪಾರ್ಥಿವ ಶರೀರದ ಅಂತ್ಯಕ್ರಿಯೆ, ಇಂದು ಮಧ್ಯಾಹ್ನ 12 ಗಂಟೆಗೆ, ಬೆಂಗಳೂರಿನ ಜ್ಞಾನಭಾರತಿಯ ಕಲಾಗ್ರಾಮದ ಆವರಣದಲ್ಲಿ, ಸರ್ಕಾರಿ ಗೌರವಗಳೊಂದಿಗೆ ನಡೆಯಲಿದೆ. ಸಾಲು ಮರದ ತಿಮ್ಮಕ್ಕ ಅವರ ಪಾರ್ಥಿವ ಶರೀರ, ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ, ಇಂದು ಬೆಳಗ್ಗೆ 7.30 ರಿಂದ 10.30 ರ ವರೆಗೆ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಲಭ್ಯ ಎಂದು, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಸಾಲು ಮರದ ತಿಮ್ಮಕ್ಕ ಅವರದ್ದು, ಮಹಾನ್ ವ್ಯಕ್ತಿತ್ವ. ಪರಿಸರದ ಉಳಿವಿಗಾಗಿ, ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದರು. ಅವರು ಕರ್ನಾಟಕ ಮತ್ತು ಭಾರತದ ಹೆಮ್ಮೆ ಎಂದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಕಂಬನಿ ಮಿಡಿದಿದ್ದಾರೆ. ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರ ಪರಿಸರ ರಕ್ಷಣೆ ಕೈಂಕರ್ಯ ಅಭೂತಪೂರ್ವ ಮತ್ತು ಐತಿಹಾಸಿಕ. ಭವಿ ್ಯದ ಪೀಳಿಗೆಗೆ ಮಾದರಿಯಾಗಿದೆ ಎಂದು ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ್ ಜೋಶಿ ಸಂತಾಪ ಸೂಚಿಸಿದ್ದು, ಕಂಬನಿ ಮಿಡಿದಿದ್ದಾರೆ. ಸಾಲುಮರದ ತಿಮ್ಮಕ್ಕ ಅವರ ನಿಧನಕ್ಕೆ, ರಾಷ್ಟ್ರೀಯ ಸ್ವಯಂಸೇವಕ ಸಂಘದ, ಸರಕಾರ್ಯವಾಹ, ದತ್ತಾತ್ರೇಯ ಹೊಸಬಾಳೆ ಹಾಗೂ ಕ್ಷೇತ್ರೀಯ ಸಂಘಚಾಲಕ ವಿ. ವಾಮನ ಶೆಣೈ ಸೇರಿದಂತೆ, ಅನೇಕ ಗಣ್ಯರು ಸಂತಾಪ ವ್ಯಕ್ತ ಪಡಿಸಿದ್ದಾರೆ.

<><><>

**ಕೊಡಗು ಜಿಲ್ಲೆಯ, ಗಡಿ ಗ್ರಾಮಗಳಾದ,** ಸಂಪಾಜೆ, ಕರಿಕೆ, ಪೆರಾಜೆ, ಚೆಂಬು ಭಾಗಗಳಲ್ಲಿಯೂ, ಕಾಫಿ ಬೆಳೆಯಲು, ಸಾಕಷ್ಟು ಅವಕಾಶಗಳಿವೆ ಎಂದು, ಕಾಫಿ ಮಂಡಳಿ ಸದಸ್ಯ, ತಳೂರು ಕಿಶೋರಕುಮಾರ, ಹೇಳಿದ್ದಾರೆ. ರಾಜ್ಯ ಸಹಕಾರ ಮಹಾಮಂಡಳ, ಪೆರಾಜೆಯಲ್ಲಿ ಆಯೋಜಿಸಿದ್ದ, 72ನೇ ಅಖಿಲ ಭಾರತ, ಸಹಕಾರ ಸಪ್ತಾಹಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು. ರಾಜ್ಯದ ಕಾಫಿ ಉತ್ಪಾದನೆ, ಶೇಕಡ 60 ರಿಂದ 65ರಷ್ಟಿದ್ದು, ವಿಶ್ವ ಮಾರುಕಟ್ಟೆಯಲ್ಲಿ ಬಹಳ ಬೇಡಿಕೆ ಇದೆ, ಎಂದರು.

<><><>

**ಉಡುಪಿ ಜಿಲ್ಲೆ, ಬ್ರಹ್ಮಾವರ ಆಕಾಶವಾಣಿ** ಕೇಂದ್ರವನ್ನು, ಮೇಲ್ದರ್ಜೆಗೇರಿಸಲಾಗುವುದು ಎಂದು, ಉಡುಪಿ–ಚಿಕಮಗಳೂರು ಸಂಸದ, ಕೋಟ ಶ್ರೀನಿವಾಸ ಪೂಜಾರಿ, ತಿಳಿಸಿದ್ದಾರೆ. ಅಜ್ಜರಕಾಡಿನ, ಆಕಾಶವಾಣಿ ಕೇಂದ್ರಕ್ಕೆ ಭೇಟಿ ನೀಡಿದ ಸಂಸದರು, ಉಡುಪಿ ಜಿಲ್ಲೆಗೆ 3 ಎಫ್.ಎಂ. ಪ್ರಸಾರ ಕೇಂದ್ರಗಳನ್ನು ನೀಡುವಂತೆ, ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು. ಒಂದಕ್ಕೆ ಮಂಜೂರಾತಿ ದೊರೆತ್ತಿದ್ದು, ಮುಂದಿನ ಫೆಬ್ರುವರಿ ಅಥವಾ ಮಾರ್ಚ್ ತಿಂಗಳಲ್ಲಿ ಪ್ರಸಾರ ಆರಂಭವಾಗಲಿದೆ ಎಂದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**'ಮೇಕ್ ಇನ್ ಇಂಡಿಯಾ, ಮೇಕ್ ಫಾರ್ ದಿ ವರ್ಲ್ಡ್'**; ಜಪಾನ್ ದೇಶದ, ನಿಡೇಕ್ ಉತ್ಪಾದನಾ ಘಟಕಕ್ಕೆ, ಹುಬ್ಬಳ್ಳಿಯಲ್ಲಿ ಚಾಲನೆ.

**ಭಗವಾನ್ ಬಿರ್ಸಾ ಮುಂಡಾ** ಅವರ, 150ನೇ ಜಯಂತಿ; ಜನ್ ಜಾತೀಯ ಗೌರವ ದಿನಾಚರಣೆ.

**ಸರ್ದಾರ** ವಲ್ಲಭ ಭಾಯಿ ಪಟೇಲರ, 150ನೇ ಜಯಂತ್ಯುತ್ಸವ; ರಾಜ್ಯದ ಹಲವೆಡೆ, ಇಂದು, ಏಕತಾ ನಡಿಗೆ.

**ಇಂದು ಬೆಂಗಳೂರಿನಲ್ಲಿ,** ಸಾಲು ಮರದ ತಿಮ್ಮಕ್ಕ ಅವರ, ಪಾರ್ಥಿವ ಶರೀರದ ಅಂತ್ಯಕ್ರಿಯೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>